**ರೇಶ್ಮಾ ಭಟ್**

ಕಲೆ: ಬಿ.ಜಿ. ಗುಜ್ಜಾರಪ್ಪ

# ಮಶಕವೆಂಬ ಮಾಯೆ ಕಚ್ಚಿ ಕೂಗದೇ ನರರಂ?

ಒಬ್ಬ ರಾಕ್ಷಸ ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡಿ ದೇವರು ಪ್ರತ್ಯಕ್ಷನಾಗಿ ಇನ್ನೇನು ವರ ಬೇಡಿಕೊಳ್ಳಬೇಕೆಂಬ ಪ್ರಜ್ಞೆಗೆ ಬರುವಷ್ಟರಲ್ಲಿ ದಾಂಗುಡಿಯಿಟ್ಟ ಇವರ ಕಡಿತದಿಂದ ಮೈ ಕೈ ತುರಿಸುವುದರಲ್ಲಿಯೇ ಮಗ್ನನಾಗಿ, ಕಾದು ಸಾಕಾದ ದೇವರು ಅಂತರ್ಧಾನನಾದ ಕತೆ ಎಲ್ಲೋ ಓದಿದ್ದೆ. ಇಂದ್ರಾದಿ ದೇವತೆಗಳೇ ಈ ರೂಪದಲ್ಲಿ ಬಂದು ಈ ರೀತಿ ಮಾಡಿರಬಹುದೇ? ರಂಭೆ ಊರ್ವಶಿಯರನ್ನು ಸಾಕುವುದು ಎಕ್ಸ್‌ಪೆನ್ಸಿವ್ ಅನ್ನಿಸಿ ಈ ಎಕ್ಸ್‌ಪರಿಮೆಂಟ್ ಮಾಡಿ ನೋಡಿರಬಹುದೇ? ಸಂಧ್ಯಾವಂದನೆಯ ಸಮಯದಲ್ಲೇ ಪ್ರತ್ಯಕ್ಷವಾಗುವ ಇವರ ಕಡಿತದಿಂದ ತಪ್ಪಿಸಿಕೊಳ್ಳಲು ಧೂಪ, ಅಗರಬತ್ತಿಗಳನ್ನು ಉರಿಸುವ ಪರಿಪಾಠ ಅಂದಿನಿಂದ ಪ್ರಾರಂಭವಾಗಿರಬಹುದೇ? ಕಡಿತ ತುರಿಕೆಗಳನ್ನು ನಿವಾರಿಸಿಕೊಂಡು ಭಜನೆ ಅಭಂಗಗಳನ್ನು ಭಂಗವಿಲ್ಲದೆ ಸಾಂಗವಾಗಿ ಸಿಂಗ್ ಮಾಡಲು ತಾಳ ತಟ್ಟುವ ಪದ್ಧತಿ ಬಂದಿರಬಹುದೇ? ಭಕ್ತಿ ಸುಖದಿಂದಲೂ, ಮುಕ್ತಿ ಸುಖದಿಂದಲೂ, ನಿದ್ರಾ ಸುಖದಿಂದಲೂ, ಸ್ವಪ್ನ ಸುಖದಿಂದಲೂ ನಮ್ಮನ್ನು ವಂಚಿಸಬಲ್ಲ ಶಕ್ತಿ ಸಾಮರ್ಥ್ಯಗಳಿರುವ ಏಕೈಕ ಜೀವಿಗಳಲ್ಲವೇ ಇವರು? ರಕ್ತಸಂಬಂಧಿಗಳಾದರೂ ನಮ್ಮ ಶತ್ರು ಷಡ್ವರ್ಗಗಳ ಗುಂಪಿಗೆ ಇವರನ್ನು ಸೇರಿಸಿ 'ಅರಿ ಸಪ್ತವರ್ಗ' ಎಂದು ಮಾಡಿದರೆ ಹೇಗೆ?... ಹೀಗೆಲ್ಲ ಆಲೋಚಿಸುವ ಹೊತ್ತಿಗೇ ಜೈನ ಸಿದ್ಧಾಂತಗಳಲ್ಲಿ ಮೋಕ್ಷಗಾಮಿ ಜೀವನಿಗೆ ಒದಗುವ ಇಪ್ಪತ್ತೆರಡು ಪರೀಷಹಗಳಲ್ಲಿ ಇವರ ಕಡಿತವೂ ಒಂದೆಂಬ ಯಾವತ್ತೋ ಓದಿದ ನೆನಪೊಂದು ಬಂದು ನನ್ನ ಆಲೋಚನೆ ಸರಿಯಾಗಿಯೇ ಇದೆ ಎಂದು ಸಮಾಧಾನವಾಯಿತು. ಈ ಇಪ್ಪತ್ತೆರಡು ಪರೀಷಹಗಳಲ್ಲಿ ಹೆಂಗಸರಿಂದಾಗುವ ತೊಂದರೆಯೂ ಒಂದು ಇದೆ ಎಂಬ ಇನ್ನೊಂದು ನೆನಪು ಮರುಕಳಿಸಿ ಬಂದು ಮೇಲಿನ ಎರಡು ಕೆಟಗರಿಗೂ ಇವರನ್ನು ಸೇರಿಸಬಹುದು ಎಂದೂ ತೋರಿತು. ಹೆಣ್ಣುಗಳೇ ಅಪಾಯವನ್ನು ತಂದೊಡ್ಡುವ, ಕಚ್ಚುವ ಇತ್ಯಾದಿ ವಿಷಯಗಳಲ್ಲಿ ಮುಂಚೂಣಿಯಲ್ಲಿರುವುದರಿಂದ ಹೀಗೆ ಮಾಡಿ ಪರೀಷಹಗಳ ಪಟ್ಟಿಯನ್ನು ಇಪ್ಪತ್ತೊಂದಕ್ಕೆ ಇಳಿಸಬಹುದೆಂದು ಕಂಡಿತು. ಆದರೀ ಕಡಿತ ತುಡಿತಗಳನ್ನೆಲ್ಲ ನಿವಾರಿಸಿಕೊಂಡು ಇಷ್ಟೊಂದು ಜನ ಋಷಿ ಮುನಿಗಳೂ, ತೀರ್ಥಂಕರರೂ, ಜಿನರೂ, ಕೇವಲಿಗಳೂ, ಬಿಕ್ಕುಗಳೂ ಈ ನೆಲದಲ್ಲಿ ಆಗಿ ಹೋಗಲು

